International Journal of Kannada Research 2017; 3(1): 73-75

International Journal of Kannada Research
www.kannadajournal.com

ISSN: 2454–5813
IJSR 2017; 3(1): 73-75
© 2017 IJKS
www.kannadajournal.com
Received: 11-11-2016
Accepted: 12-12-2016

**ರಾಮರೆಡ್ಡಿ. ಕೆ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಕೆ. ಎಲ್. ಇ. ಸಂಸ್ಥೆಯ,
ಎಸ್. ವಿ. ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ,
ಜಿಲ್ಲೆ ಬೆಳಗಾವಿ.

**Correspondence**
**ರಾಮರೆಡ್ಡಿ. ಕೆ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಕೆ. ಎಲ್. ಇ. ಸಂಸ್ಥೆಯ, ಎಸ್. ವಿ. ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ, ಜಿಲ್ಲೆ ಬೆಳಗಾವಿ.

# ಸವದತ್ತಿ ಎಲ್ಲಮ್ಮ: ಇತಿಹಾಸ ಮತ್ತು ಪುರಾಣ

**ರಾಮರೆಡ್ಡಿ. ಕೆ**

ಭಾರತ ದೇಶದಲ್ಲಿ ದೇವರು ಮತ್ತು ಧರ್ಮಗಳ ಕುರಿತಾಗಿ ಇರುವ ನಂಬಿಕೆ ಅಗಣಿತವಾದದ್ದು. ಅನಾದಿ ಕಾಲದಿಂದಲೂ ಆ ನಂಬಿಕೆ ಸಾಗುತ್ತಲೇ ಇಲ್ಲಿಯವರೆಗೆ ಬಂದಿದೆ. ಪ್ರಕೃತಿಯಲ್ಲಿನ ಮಣ್ಣು, ಕಲ್ಲು, ಮರ, ಗಾಳಿ, ಬೆಂಕಿ, ನೀರು, ಪ್ರಾಣಿ, ಪಕ್ಷಿ ಮತ್ತು ಕೊನೆಗೆ ಮನುಷ್ಯ ಕೂಡ ದೇವತ್ವವನ್ನು ಪಡೆದುಕೊಂಡಿದ್ದಾನೆ. ಒಟ್ಟಿನಲ್ಲಿ 'ಸಮಗ್ರ ಪರಿಸರದ ಎದುರಾಳಿಯಾಗಿ ಬದುಕಲು ಕಷ್ಟ ಸಾಧ್ಯವೆಂದು ಅರಿತ ಮಾನವ, ಪ್ರಕೃತಿಯೊಂದಿಗೆ ಸಂಬಂಧ ಅನ್ಯೋನ್ಯವಾಗಿದ್ದರೇನೇ ಹೆಚ್ಚು ಸಮಂಜಸವೆಂದು ಭಾವಿಸಿದನು. ಅದಕ್ಕಾಗಿ ಅವನು ತನ್ನ ಜೀವನ ಪ್ರಕೃತಿಯ ಅವಲಂಬಿತವಾಗಿದೆ' ಎಂದು ನಂಬಿ ಆ ಹಿನ್ನೆಲೆಯಲ್ಲಿ ದೇವರು ಮತ್ತು ಧರ್ಮಗಳನ್ನು ಸೃಷ್ಟಿಸಿಕೊಂಡನು.

ಹೀಗೆ ಬೆಳೆದು ಬಂದಿರುವ ಅನೇಕ ದೇವರುಗಳಲ್ಲಿ ಸವದತ್ತಿ ಎಲ್ಲಮ್ಮ ಕೂಡ ಪ್ರಸಿದ್ಧಳು. ಎಲ್ಲಮ್ಮನ ಕುರಿತಾಗಿ ಈಗಾಗಲೇ ಅನೇಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. 'ಎಲ್ಲಮ್ಮನನ್ನು ಕುರಿತಾದ ಸಾಮಗ್ರಿ ಮೂರು ವಿಭಿನ್ನ ಆಕರಗಳಲ್ಲಿ ತೊಡಗಿಕೊಂಡಿದ್ದು ಒಂದೊಂದು ಅನೇಕ ಸಾಮ್ಯ ಮತ್ತು ವೈರುಧ್ಯಗಳನ್ನು ಒಳಗೊಂಡಿವೆ. ಅವುಗಳನ್ನು ಶಿಷ್ಟಪದ ಪುರಾಣದಲ್ಲಿ ದೊರೆಯುವ ಕಥೆಗಳು; ಐತಿಹಾಸಿಕ ವ್ಯಕ್ತಿಗಳ ಜೊತೆ ಹೆಣೆಯಲಾದ ಸಂಗತಿಗಳು; ಜನಪದ ಹಾಡುಗಳ ಮೂಲಕ ವಿಭಿನ್ನ ಪ್ರದೇಶಗಳಲ್ಲಿ ಹರಡಿ ಚದುರಿದ ಸ್ಥಿತಿಯಲ್ಲಿರುವ ಘಟನೆಗಳು.' ಎಂದು ವಿಂಗಡಿಸಬಹುದು. ಇವು 'ಸಂಶೋಧಕರಿಗೆ ಮತ್ತು ಸಂಸ್ಕೃತಿಯ ಅಭ್ಯಾಸಿಗಳಿಗೆ ಒಂದು ದೊಡ್ಡ ಸವಾಲು. ರೇಣುಕೆಯ ಮತ್ತು ಎಲ್ಲಮ್ಮನ ಕಥೆಗಳು ಒಂದರೊಳಗೊಂದು ತಳುಕು ಹಾಕಿಕೊಂಡು ಅನೇಕ ಗೊಂದಲಗಳನ್ನು ಸೃಷ್ಟಿಸಿವೆ. ಅದೆಷ್ಟೋ ಸಮಸ್ಯೆಗಳನ್ನು ನಮ್ಮೆದುರು ನಿಲ್ಲಿಸಿವೆ. ಆದರೆ ಇವುಗಳಲ್ಲಿ ನಿಜರೂಪ ಯಾವುದು? ಎಂಬ ಪ್ರಶ್ನೆ ಇಂದಿಗೂ ಉಳಿದುಕೊಂಡಿದೆ.

ಏಳುಕೊಳ್ಳದ ಎಲ್ಲಮ್ಮನೆಂದು (ಸಿದ್ಧರ ಕೊಳ್ಳ, ಪರಸಗಡಕೊಳ್ಳ, ಗೊರವನಕೊಳ್ಳ, ತಮ್ಮಣ್ಣ ಕೊಳ್ಳ, ಮಾವಿನಕೊಳ್ಳ, ಸಂಗಪ್ಪನಕೊಳ್ಳ, ಜೋಗೆಸಾಬನ ಕೊಳ್ಳ) ಅಥವಾ ಏಳು ಗುಡ್ಡದ (ಮುರಗೋಡ, ಸೊಗಲ, ನವಿಲುತೀರ್ಥ, ಪರಸಗಡ, ಸವದತ್ತಿ, ಮುನವಳ್ಳಿ ಮತ್ತು ಎಲ್ಲಮ್ಮನಗುಡ್ಡ) ಎಲ್ಲಮ್ಮನೆಂದು ಕರೆಯಿಸಿಕೊಳ್ಳುವ ಎಲ್ಲಮ್ಮ ಲಕ್ಷಾಂತರ ಭಕ್ತರು ನಡೆದುಕೊಳ್ಳುವ ದೇವತೆ. ಒಂದೆಡೆ ಈಕೆಯನ್ನು ಪಾರ್ವತಿದೇವಿಯ ಅಂಶ ಸಂಭೂತಳು ಎಂದು ನಂಬಲಾಗುತ್ತದೆ. ಮತ್ತೊಂದೆಡೆ ಈಕೆಯನ್ನು ರೇಣುಕಾ ಎಲ್ಲಮ್ಮನೆಂದು, ಕರೆಯಲಾಗುತ್ತದೆ. ಶಿಷ್ಟಪದ ಪುರಾಣದಲ್ಲಿ 'ರೇಣುಕಾ' ಎನ್ನುವ ಹೆಸರು ಬರುತ್ತದೆಯೇ ಹೊರತು ಅಲ್ಲಿ ಎಲ್ಲಿಯೂ ರೇಣುಕೆಯೇ 'ಎಲ್ಲಮ್ಮ' ಎಂದು ಹೇಳಲಾಗಿಲ್ಲ. ರೇಣುಕೆಯ ಹೆಸರಿನಲ್ಲಿ ಎಲ್ಲಿಯೂ ದೇವಾಲಯಗಳಿಲ್ಲದಿರುವುದು ಮತ್ತೂ ಎಲ್ಲಮ್ಮನ ಹೆಸರಿನ ಗುಡಿಗಳು ಕರ್ನಾಟಕ ಮತ್ತು ಆಂದ್ರಪ್ರದೇಶ ಮಹಾರಾಷ್ಟ್ರದ ಗಡಿಭಾಗಗಳಲ್ಲಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಜನಪದ ಮತ್ತು ಶಿಷ್ಟಪದ ಪರಂಪರೆಗಳ ಸ್ವೀಕರಣ ಮತ್ತು ನಿರಾಕರಣಗಳು.

**ಪೌರಾಣಿಕ ಹಿನ್ನೆಲೆ:** ಪೌರಾಣಿಕ ಕಥೆಯ ಮತ್ಸ್ಯ, ವಾಯು, ಮಾರ್ಕಂಡೇಯ, ಸ್ಕಂದ, ಬ್ರಹ್ಮಾಂಡ ಮೊದಲಾದ ಪುರಾಣಗಳಲ್ಲಿಯೂ, ಮಹಾಭಾರತ, (ಆದಿ, ಸಭಾ, ಅನುಶಾಸನ ಮತ್ತು ವನಪರ್ವಗಳಲ್ಲಿಯೂ) ರಾಮಾಯಣ(ಬಾಲಕಾಂಡ)ದಲ್ಲಿಯೂ ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ ಉಲ್ಲೇಖವಾಗಿದೆ. ಇಲ್ಲಿ ಒಂದೊಂದು ಕಡೆ ಭಿನ್ನವಾದ ಕತೆಯನ್ನು ಕಾಣಬಹುದಾಗಿದೆ.

- ಹರಿವಂಶ, ವಾಯುಪುರಾಣ, ಭಾಗವತ, ಮಹಾಭಾರತದ ವನಪರ್ವ ರಾಮಾಯಣದ ಬಾಲಕಾಂಡದಲ್ಲಿ –

1. ರೇಣುಕಾದೇವಿಗೆ ವ್ಯಭಿಚಾರದ ಆರೋಪ– ಪರಶುರಾಮನಿಂದ ರೇಣುಕೆಯ ಮತ್ತು ಸೋದರರ ರುಂಡ ಚಂಡಾಡಲು ತಂದೆಯ ಆಜ್ಞೆ, ಸಂಪ್ರೀತನಾದ ಜಮದಗ್ನಿಯ ವರದಿಂದ ತಾಯಿ ಮತ್ತು ಸೋದರರನ್ನು ಜೀವಂತಗೊಳಿಸುವುದು.
2. ಆಶ್ರಮಕ್ಕೆ ಕಾರ್ತವೀರ್ಯನ ಆಗಮನ ಸುಖ ಭೋಜನ ಸತ್ಕಾರ– ನಂತರ, ಕಾಮಧೇನುವಿನ ಮಹಿಮೆ ತಿಳಿದ ಕಾರ್ತವೀರ್ಯನಿಂದ ಕಾಮಧೇನುವನ್ನು ಕೊಂಡೊಯ್ಯುವ ಯತ್ನ, ಜಮದಗ್ನಿಯ ಕೊಲೆ. ಇದನ್ನು ತಿಳಿದ ಪರಶುರಾಮನಿಂದ ಕಾರ್ತವೀರ್ಯನ ಕೊಲೆ, ಅವನ ರಾಜ್ಯ ನಿರ್ಮೂಲನೆ.

- ಸ್ಕಂದ ಪುರಾಣ, ನಾಗರಖಂಡ, ತ್ರಿಪುರಾ ರಹಸ್ಯಗಳಲ್ಲಿ

1. ಕ್ಷತ್ರಿಯನಾದ ಕಾರ್ತವೀರ್ಯ ಅರಸನ ಅಹಂಕಾರ ಉಪಟಳ. ಕಾರ್ತವೀರ್ಯನಿಂದ ಜಮದಗ್ನಿಯ ಕೊಲೆ, ರೇಣುಕಾ 21 ಸಲ ಎದೆ ಬಡಿದುಕೊಂಡು ಶೋಕಿಸಿದ್ದಕ್ಕಾಗಿ ಪರಶುರಾಮ 21 ಸಲ ಭೂಮಿಯನ್ನು ಸುತ್ತಿ ಕ್ಷತ್ರಿಯರ ಬೇಟೆಯಾಡಿ ಅವರ ನಿರ್ಮೂಲನೆ ಮಾಡುತ್ತಾನೆ.

- ಜೈನ ಪುರಾಣದ (ಗುಣಭದ್ರನ ಉತ್ತರ ಪುರಾಣ) ಕಥಾನಕ:

1. ಕಾನ್ಯ ಕುಬ್ಜದ ಅರಸನ ತೊಂಭತ್ತೊಂಭತ್ತು ಮಕ್ಕಳಲ್ಲಿ ಕೊನೆಯವಳು ರೇಣುಕೆ.
2. ಇಕ್ಷ್ವಾಕು ವಂಶದ ಸಹಸ್ರಬಾಹು. ಆತನ ಚಿಕ್ಕಪ್ಪ ಶತಬಿಂದು. ಶತಬಿಂದುವಿನ ಮಗ ಜಮದಗ್ನಿ. ಕಾನ್ಯ ಕುಬ್ಜದ ಅರಸನ ಮಗಳಾದ ರೇಣುಕೆಯ ಜೊತೆ ಮದುವೆ. ಇವರಿಗೆ ಇಂದ್ರರಾಮ ಮತ್ತು ಶ್ವೇತರಾಮ ಎಂಬ ಇಬ್ಬರು ಮಕ್ಕಳು.
3. ಸಹಸ್ರಬಾಹು ತನ್ನ ಮಗನಾದ ಕೃತವೀರನ ಜೊತೆ ಸೋದರ ಜಮದಗ್ನಿಯ ಆಶ್ರಮಕ್ಕೆ ಆಗಮನ. ಅಲ್ಲಿ ಎಲ್ಲರಿಗೂ ಮೃಷ್ಟಾನ್ನ ಭೋಜನ. ಇದನ್ನು ಕಂಡ ಸಹಸ್ರಬಾಹು ತನ್ನ ಚಿಕ್ಕಮ್ಮ ರೇಣುಕೆಯ ಮೂಲಕ ಕಾಮಧೇನುವಿನ ಮಹಿಮೆ ತಿಳಿಯುತ್ತದೆ.
4. ಕೃತವೀರನು ಜಮದಗ್ನಿಯನ್ನು ಕೊಂದು ಕಾಮಧೇನುವನ್ನು ಕೊಂಡೊಯ್ಯುತ್ತಾನೆ. ಇದನ್ನು ತಿಳಿದ ಇಂದ್ರರಾಮ(ಪರಶುರಾಮ)ನಿಂದ ಕೃತವೀರನ ಕೊಲೆ. ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ. ಕ್ಷತ್ರಿಯರ ಬೇಟೆ.

ಹೀಗೆ ಈ ಕತೆಯು ಒಮ್ಮೆ ಬ್ರಾಹ್ಮಣ, ಒಮ್ಮೆ ಶೈವ, ಮತ್ತೊಮ್ಮೆ ಜೈನ ಎಂಬ ಮೂರು ಮತಗಳನ್ನು ಆಧರಿಸಿದ ವಿವರಗಳು ದೊರಕುತ್ತವೆ. ಇಲ್ಲಿ ಎಲ್ಲಿಯೂ ಎಲ್ಲಮ್ಮ ಎಂಬ ಹೆಸರೂ ಉಲ್ಲೇಖವಾಗಿಲ್ಲವೆಂದು ಡಾ.ದೇವೇಂದ್ರಕುಮಾರ ಹಕಾರಿಯವರು ಅಭಿಪ್ರಾಯಪಡುತ್ತಾರೆ.

- ರೇಣುಕೆಯ ಮೂಲವನ್ನು ಕುರಿತಾದ ಒಂದು ಐತಿಹ್ಯದ ಪ್ರಕಾರ ಈಕೆ ಉತ್ತರ ದೇಶದಿಂದ ಕರ್ನಾಟಕಕ್ಕೆ ಬಂದವಳು, ಮೂಲತಃ ಕಾಶ್ಮೀರದವಳು. ಅಲ್ಲಿಯ ರೇಣುಕ ರಾಜನ ಮಗಳು. ಜಮದಗ್ನಿಯನ್ನು ಮದುವೆಯಾದವಳು.
- ಇದಕ್ಕೆ ವೈರುಧ್ಯವೆಂಬಂತೆ ಈಕೆ ಮೂಲತಃ ಉಗರಗೊಳ್ಳದ ಹೆಣ್ಣು ಮಗಳು. ಮನೆಯಿಂದ ಪರಿತ್ಯಕ್ತಳಾದ ಈಕೆ ರೋಗಿಯಾಗಿ ಕೊನೆಗೆ ರೋಗದಿಂದ ಮುಕ್ತಳಾದಳೆಂದು ತಿಳಿದುಬರುತ್ತದೆ.
- ಎಲ್ಲರ ತಿರಸ್ಕಾರಕ್ಕೆ ಒಳಗಾದ ಎಲ್ಲಮ್ಮನಿಗೆ ಆಶ್ರಯ ಕೊಟ್ಟವರು ಸತ್ಯವ್ವ ಮತ್ತು ಮಾತಂಗಿ. ತಾಯಿಯ ಪಾವಿತ್ರ್ಯ ಅರಿತ ಪರಶುರಾಮ ತಾಯಿಯನ್ನು ಕೊಲ್ಲುವುದಿಲ್ಲ. ಮತ್ತೆ ಸಿದ್ಧರ ಸೇವೆ ಕೈಕೊಂಡು ಕೆಲವು ಸಿದ್ಧಿಗಳನ್ನು ಪಡೆಯುತ್ತಾಳೆ, ಜನರ ಗೌರವಾದರಗಳಿಗೆ ಪಾತ್ರಳಾಗುತ್ತಾಳೆ. ದೀನ ದಲಿತರಿಗೆ ನಿಮ್ನ ವರ್ಗದವರಿಗೆ ಆಶ್ರಯ ನೀಡುತ್ತಾಳೆ. ಮುಂದೆ ಈಕೆ ಜನಪದ ವೃಂದಗಳಲ್ಲಿ ತಾಯಿ, ಅಮ್ಮ, ಎಲ್ಲರ ಅಮ್ಮ > ಎಲ್ಲಮ್ಮನಾಗಿರಬಹುದು.
- ಜಾನಪದ ಕಥೆಗಳ ಪ್ರಕಾರ ಎಲ್ಲಮ್ಮ ದಲಿತ ದೇವತೆ ಎಂದು ಪ್ರೊ ಎನ್ ಚಂದ್ರಪ್ಪನವರು ಅಭಿಪ್ರಾಯಪಡುತ್ತಾರೆ. ತೆಲುಗು ಮಹಾಕಾವ್ಯ ಪರಂಪರೆಯಲ್ಲಿ ಎಲ್ಲಮ್ಮನ ಕಥೆಯನ್ನು ವಿವರವಾಗಿ ಪರಿಶೀಲಿಸಿ ಎರಡೂ ಭಾಷೆಗಳಲ್ಲಿ ಜಾನಪದ ಎಲ್ಲಮ್ಮ ಮತ್ತು ಪುರಾಣದ ರೇಣುಕಾದೇವಿಯ ಕಥೆಗಳು ಕಲಸು ಮೇಲೋಗರವಾಗಿವೆಯೆಂದು ಉಭಯಭಾಷಾ ವಿದ್ವಾಂಸರ ಅಭಿಪ್ರಾಯವಾಗಿದೆ.

**ಐತಿಹಾಸಿಕ ಹಿನ್ನೆಲೆ**

ಸವದತ್ತಿಯು ರಟ್ಟರ ಆಳ್ವಿಕೆಗೆ ಒಳಪಟ್ಟ ಪ್ರದೇಶ. ಸವದತ್ತಿ ರಟ್ಟರ ಮೂಲ ರಾಜಧಾನಿ. ಈ ರಟ್ಟರಲ್ಲಿ ಕೆಲವರು ಕಾರ್ತವೀರ್ಯನನ್ನು ಆದರ್ಶಪುರುಷನನ್ನಾಗಿ ಇಟ್ಟುಕೊಂಡ ಹಾಗೆ ಕಾಣುತ್ತದೆ. ಈ ಪ್ರದೇಶದ ಒಂದು ವರ್ಗದ ಮೂಲ ಆದರ್ಶ ಪುರುಷ ಸಹಸ್ರಬಾಹು ಕಾರ್ತವೀರ್ಯ. ಇವರು ಎಲ್ಲಮ್ಮನ ಆರಾಧಕರೂ ಹೌದು. ಈ ವರ್ಗದ ಜನರು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದ ಬೇರೆ ಬೇರೆ ಭಾಗದಲ್ಲಿ ವಾಸಿಸುತ್ತಿದ್ದಾರೆ.

ಸ್ಥಳಿಕ ಕಥೆಯ ಪ್ರಕಾರ ಯುದ್ಧದಲ್ಲಿ ಸೋತು ಅಳಿದುಳಿದ ಕಾರ್ತವೀರ್ಯನ ಅನುಯಾಯಿಗಳು ಮತ್ತು ಬೆಟಸೂರ ಗ್ರಾಮದ ನಾಯಕ ಅನುಯಾಯಿಗಳು ತಮ್ಮ ತಾಯಿ, ಪೂಜ್ಯ ಗುರುಗಳಾದ ಏಕನಾಥ ಜೋಗಿನಾಥರ ಹೆಸರುಗಳನ್ನು ಸ್ಮರಿಸುತ್ತಾ ಚೌಡಿಕಿ ಬಾರಿಸುತ್ತಾ ತನ್ನ ತಾಯಿ ಸೇವೆಯನ್ನು ಮಾಡಬೇಕೆಂದು ಪರಶುರಾಮನು ಅವರಿಗೆ ವಿಧಿಸಿದನು. ಬೇತಾಸುರನ ತಲೆ, ನರಗಳಿಂದ ಚೌಡಕಿಯನ್ನು, ಹಲ್ಲುಗಳಿಂದ ಸರಗಳನ್ನು ಮಾಡಲಾಯಿತೆಂದು ಹೇಳಲಾಗುತ್ತದೆ. ಹೀಗೆ ಎಲ್ಲಮ್ಮನ ಭಕ್ತರು ಪರಂಪರಾನುಗತವಾಗಿ ಸಾಂಕೇತಿಕವಾಗಿ ಕವಡೆ ಸರವನ್ನು ಧರಿಸಿ ಬುಟ್ಟಿಯಲ್ಲಿ ದೇವಿಯನ್ನು ಹೊತ್ತುಕೊಂಡು ಚೌಡಕಿಯನ್ನು ಬಾರಿಸುತ್ತಾ 'ಎಕ್ಕಯ್ಯ ಜೋಗಯ್ಯ ಉಘೆ ಉಘೆ' ಎಂದು ಸ್ಮರಿಸುತ್ತಾ ಭಿಕ್ಷೆ ಬೇಡಿ ಬಂದ ಪರಿಕರಗಳಲ್ಲಿ ಅರ್ಧದಷ್ಟನ್ನು ದೇವಿಗೆ ಅರ್ಪಿಸಿ ಪೂಜಿಸುವ ಭಕ್ತರು ಇಂದಿಗೂ ಇದ್ದಾರೆ.

ಈ ಪರಂಪರೆಯ ಜನ ವರ್ಗದವರೇ ಇಂದು ಎಲ್ಲಮ್ಮನ ಭಕ್ತರು. ಇವರುಗಳು ದೀಕ್ಷೆ ಪಡೆದು ಕವಡೆ ಹಾರಗಳನ್ನು ಧರಿಸಿ ಎಲ್ಲಮ್ಮನ ಕಳಶವುಳ್ಳ ಬುಟ್ಟಿಯನ್ನು ತಲೆ ಮೇಲೆ ಹೊತ್ತು ದೇವಿಯ ಆರಾಧನೆಯ ಸಂಕೇತವಾಗಿ ಸ್ತ್ರೀ ವೇಷಧಾರಿಗಳಾಗಿ ಮನೆ ಮನೆಗೆ ಹೋಗಿ ಬೇಡಿ ಅದನ್ನು ದೇವಿಗೆ ಅರ್ಪಿಸಿ, ಜೀವಿಸುವರು. ಈಗ ಈ ಪ್ರದೇಶದ ಬಾಹುಸಾರ ಕ್ಷತ್ರಿಯ ವರ್ಗದಲ್ಲಿ ಶ್ರೀ ರೇಣುಕಾದೇವಿ ಎಲ್ಲಮ್ಮ ಅರಾಧನೆ ಪರಂಪರೆ ಇರುವುದನ್ನು ನೋಡಿದರೆ, ಮೇಲೆ ಊಹಿಸಿದಂತೆ ರಟ್ಟರು ಈ ವರ್ಗದವರಾಗಿದ್ದರೆಂಬುದುಕ್ಕೆ ಪುಷ್ಠಿ ದೊರೆಯುತ್ತದೆ.

'ಸವದತ್ತಿಯ ತಾಲೂಕು ಕಚೇರಿಯಲ್ಲಿರುವ ನಾಲ್ವಡಿ ಲಕ್ಷ್ಮೀ ದೇವರಸನ ಕ್ರಿ.ಶ.1224ರ ಶಾಸನದಲ್ಲಿ ಉಲ್ಲೇಖಿಸಿರುವ ಒಂದು ಉಪಮಾನ ಈ ಸಂದರ್ಭಕ್ಕೆ ಮತ್ತಷ್ಟು ಪುಷ್ಠಿ ನೀಡುತ್ತದೆ. ಲಕ್ಷ್ಮೀ ದೇವರಸ ವೇಣುಗ್ರಾಮ ಆಳುತ್ತಿದ್ದಾಗ, ಕೋಲಾರದ ಪ್ರಭು ಕೇಶಿರಾಜನು ಕಟ್ಟಿಸಿದ ಮಲ್ಲಿನಾಥ ಬಸದಿಗೆ ಹಲವಾರು ಭೂಮಿ

ದಾನ ಮಾಡಿದ ವಿಷಯ ಈ ಶಾಸನದಲ್ಲಿದೆ. ಆಗ ಈ ಅರಸನ ಮಂಡಳೇಶ್ವರನಾದ ಕೇಶಿರಾಜನು ಬನಹಟ್ಟಿ-18ನ್ನು ಆಳುತ್ತಿದ್ದನು. ಈ ಶಾಸನದಲ್ಲಿ ತನ್ನ ವಂಶಾವಳಿಯ ಪರಾಕ್ರಮವನ್ನು ತಿಳಿಸುವಾಗ ಇವನ ಅಜ್ಜನಾದ ಮಹಾದೇವನು ತನ್ನ ಪ್ರಭುವಿನ ಶತ್ರುಗಳನ್ನು ಯುದ್ಧದಲ್ಲಿ ಶೌರ್ಯದಿಂದ ಯಮಪುರಿಗೆ ಅಟ್ಟಿದನೆಂದು ವರ್ಣಿಸುವ ಶಾಸನದ 20ನೇ ಸಾಲಿನಲ್ಲಿ

"…..ಗಂಧಗಜಂಗಳಿಂತುಳಿದುಕೊಂದಂ ಮಾಯಿದೇವೋ ತ್ತಮಂ, ಮುಂಜಮದಗ್ನಿರಾಮನಖಿಳ ಕ್ಷಿತಿನಾಥರನಿಪ್ಪತ್ತೊಂದು ಸೂಳ್ಮ ಮಂಜಿನ ಗಾಳಿಯನ್ತೆ ತವೆಕೊಂದವೊಲೀ ಮಹದೇವ ನಾಯಕರಂ ಕುಂಜರದಿಂದೆ ವೈರಿ ಕುಲಮ ತವೆ ಕೊಂದು ಪತಂಗೆ ಮಾಡಿದಂ

21ನೇ ಸಾಲು "…..ತಾಂ ಜಳದಾನ ವಿಕ್ರಿಯಂಗಳಂ ಬನಿಹಟ್ಟಿ ಸಮುದ್ಭವೇಶ್ವರಂ:" ಹೀಗೆ ಶಾಸನದಲ್ಲಿ ಬಂದಿರುವ ವಿಷಯದ ಪ್ರಕಾರ ಜಮದಗ್ನಿ ಮತ್ತು ಪರಶುರಾಮನ ಕಥೆಯು ಈ ಭಾಗದಲ್ಲಿ ಹೆಚ್ಚು ಪ್ರಚುರಗೊಳ್ಳಲು ಸಾಧ್ಯವಾಗಿರಬಹುದು.

ಕವಿಗಳಾದ ಸಜ್ಜನ ತಿಲಕ, ನೇಮಿಚಂದ್ರ, ರಾಜಾದಿತ್ಯ, ಕರ್ಣಪಾರ್ಯ, ಬಾಲಚಂದ್ರ, ಪಾರ್ಶ್ವನಾಥ, 2ನೆಯ ಗುಣವರ್ಮ, ಮುನಿಚಂದ್ರ ಮತ್ತು 2ನೆಯ ಜಾಯೇಂದ್ರ ಈ ಎಲ್ಲ ಸುಪ್ರಸಿದ್ಧ ವಿದ್ವಾಂಸರು ರಟ್ಟರ ರಾಜಧಾನಿಯಲ್ಲಿದ್ದರೆಂಬುದು ಇತಿಹಾಸದಿಂದ ತಿಳಿದುಬರುತ್ತದೆ.

'ರಟ್ಟರ ಆಶ್ರಯದಲ್ಲಿದ್ದ ಇನ್ನೊಬ್ಬ ಜೈನ ಕವಿ ನೇಮಿಚಂದ್ರ. ಈತ ತನ್ನ ಲೀಲಾವತಿ ಕಾವ್ಯದಲ್ಲಿ ಅಗತ್ಯ ಮೀರಿ ಪದ್ಮಾವತಿಯ ಪ್ರಸ್ತಾಪ ಮಾಡುವುದನ್ನು ನೋಡಿದರೆ ಸವದತ್ತಿಯಲ್ಲಿ ಪದ್ಮಾವತಿ ಸಂಪ್ರದಾಯ ದಟ್ಟವಾಗಿರಬಹುದೆಂಬುದು ಮನದಟ್ಟಾಗುತ್ತದೆ. ಕಾರಣ ಪದ್ಮಾವತಿಯ ಮೇಲಿನ ಭಕ್ತಿ. ಈಕೆ ಮೊದಲಿನಿಂದಲೂ ಜನ ಸಾಮಾನ್ಯರ ದೇವತೆ', ಇಂದಿಗೂ ಕೂಡ.

ಕ್ರಿ.ಶ.1514ರಲ್ಲಿ ಯಲ್ಲಮ್ಮನ ಗುಡಿಯ ದಕ್ಷಿಣ ಭಾಗಕ್ಕಿರುವ ಬಾಗಿ ಬೊಮ್ಮಪ್ಪನಾಯಕನು ಬರೆಸಿದ ಶಾಸನದಲ್ಲಿ ದೇವಿಯನ್ನು ಜತ್ತಕ ದೇವಿಯೆಂದು ಉಲ್ಲೇಖಿಸಲಾಗಿದೆ.

ಡಾ.ಎನ್.ಚಂದ್ರಪ್ಪನವರ ಪ್ರಕಾರ ಎಲ್ಲಮ್ಮ ಏಳು ಗುಡ್ಡಗಳು, ಏಳು ಕೊಳ್ಳಗಳ ಸಂಸರ್ಗದಲ್ಲಿರುವ ದರಿಂದ ಈಕೆ ಜಲಮೂಲ ದೇವತೆಯೆಂದೂ, ವೃಕ್ಷ ಮತ್ತು ಜಲಮೂಲಗಳಿಗೆ ಸಂಬಂಧವಿರುವದನ್ನು ಉಲ್ಲೇಖಿಸಿದ್ದಾರೆ.

ಜನಪದ ದೇವತೆಯಾದ ಎಲ್ಲಮ್ಮನನ್ನು ಉದಾತ್ತೀಕರಿಸಿ ಪೌರಾಣಿಕ ಮಟ್ಟದ ರೇಣುಕೆಯ ಜೊತೆ ತಳುಕು ಹಾಕಲಾಗಿದೆ. ಇಲ್ಲವೇ ರೇಣುಕೆಯ ವಾಸ್ತವ ಕಥೆಯನ್ನು ಜನಪದ ಕಥೆಯನ್ನು ಮೂಲದ ಎಲ್ಲಮ್ಮನೊಂದಿಗೆ ಸೇರಿಸಲಾಗಿದೆ. ಹೀಗಾಗಿ ಇಲ್ಲಿರುವ ಹಲವಾರು ಸನ್ನವೇಶಗಳಲ್ಲಿ ದ್ವಂದ್ವಗಳಿವೆ. ಕ್ಷತ್ರಿಯ ವೀರ ಧರ್ಮಕ್ಕೂ, ಬ್ರಹ್ಮ ಜಿಜ್ಞಾಸು ಮುನಿ ಧರ್ಮಕ್ಕೂ ಇರುವ ವೈಷಮ್ಯವನ್ನು, ಪುರುಷ ಪ್ರಧಾನ ಮತ್ತು ಮಾತೃ ಪ್ರಧಾನ ಸಂಸ್ಕೃತಿಗಳ ಘರ್ಷಣೆಗಳನ್ನು, ಶೈವರಲ್ಲಿ ಮತ್ತು ಶಾಕ್ತರಲ್ಲಿ ನಡೆದ ವಿರೋಧವನ್ನು ಈ ಕಥೆಯ ಅಂತರಂಗದಲ್ಲಿ ಕಾಣುತ್ತೇವೆ. ನಾಗ ಜನಾಂಗ ತನ್ನ ಪ್ರಭುತ್ವ ಕಳೆದುಕೊಂಡು ಶೈವ ಸಂಸ್ಕೃತಿಯೊಡನೆ ಒಂದಾಗಿ ಬದುಕಲು ಹವಣಿಸಿರುವ ಸಂಗತಿಗಳು. ನಾಥ ಪಂಥದ, ಸಿದ್ಧರ ಜೀವನದ ವಾಸ ಸ್ಥಳಗಳ ಕುರಿತಾದ ಎಳೆಗಳು ಇಲ್ಲಿ ಕಂಡುಬರುತ್ತವೆ. (ಎಲ್ಲಮ್ಮನ ಆಟ- ಚಂದ್ರಗೌಡ ಕುಲಕರ್ಣಿ, ಪ್ರ: ಸಂಗಾತಿ ಪ್ರಕಾಶನ ಕಡದಳ್ಳಿ, ಪುಟ:15)

ಜನಪದ ಹಾಡುಗಳಲ್ಲಿ

1. ಹೊಕ್ಕುಳದೇವಿ ಕಾಲ್ಮುಂದ ಮಾಡಿ;
   ವಾರಿ ವಾರಿ ತಿರುಗುತ್ತಿದ್ದಳು;
   ಏಳು ಮಂದಿ ಸಿದ್ಧರನಾಕಿ
   ಒತ್ತಿ ಬಿಟ್ಟಾಳ ಪಾತಾಳಕ ದೂಡಿ
   ಮ್ಯಾಲಿಂದ ಸೀಸದ ಗುಂಡ, ಓಡಿ ಓಡಿ, ಜಡೀ ಜಡೀ.
2. ಮುನ್ನೂರರವತ್ತು ಸಿದ್ಧರ ಗುಡದಾಗ
   ಆಳ್ವಿಕೆ ಮಾಡ್ಯಾರೋ ಬಲ್ಲಂಗ
   ಚಕ್ರಹತಿಯಾರ ತಯ್ಯಾರ ಮಾಡ್ಯಾಳ್ಯಾಗ
   ಸಿದ್ಧರ ಹೊಡೆದಾಳೋ ಕ್ಷಣದಾಗ ದೈತ್ಯರನ ಹೊಡದಾಳೋ ಗಳಿಗ್ಯಾಗ'

ಈ ಎರಡು ಹಾಡಿಗೆ ಸಂಬಂಧಿಸಿದಂತೆ ಎಲ್ಲಮ್ಮ ಮತ್ತು ಸಿದ್ಧರ ನಡುವೆ ಮುಖಾ ಮುಖಿಯಾಗಿರಬೇಕು. ಇವರಿಬ್ಬರ ನಡುವೆ ಸಂಘರ್ಷಗಳು ಏರ್ಪಟ್ಟಿರಬಹುದು. ಆಗ ಎಲ್ಲಮ್ಮ ಅಥವಾ ಆಕೆಯ ಭಕ್ತರು ಸಿದ್ಧರನ್ನು ಸಂಹರಿಸಿದರೆಂದು ತಿಳಿಯಬಹುದಾಗಿದೆ. ರೇವಣ ಸಿದ್ಧರ ಗುಡಿಯು ಎಲ್ಲಮ್ಮನ ಗುಡ್ಡದಲ್ಲಿ ಇಂದಿಗೂ ಸಾಕ್ಷಿಯಾಗಿ ನಿಂತಿದೆ.

ಹೀಗೆ ಸವದತ್ತಿ ಎಲ್ಲಮ್ಮನ ಕುರಿತಾದ ಅಧ್ಯಯನ ಸಾಕಷ್ಟು ನಡೆದರೂ, ಇಲ್ಲಿಯವರೆಗೆ ಇದಮಿತ್ಥಂ ಎಂಬ ನಿರ್ಣಯಕ್ಕೆ ಬರಲಾಗಿಲ್ಲ. ಎಲ್ಲಮ್ಮ ದೇವಿಯು – ಚರಿತ್ರೆ, ಪುರಾಣ, ಜನಪದ ಪರಂಪರೆಯ ವ್ಯಾಪ್ತಿಯೊಳಗೆ ಹರಡಿ ಹೋಗಿದ್ದಾಳೆ. ಸಂಶೋಧನೆ ಕೈಗೊಂಡಷ್ಟು ಮತ್ತಷ್ಟು ಹೊಸ ಹೊಸ ವಿಷಯಗಳು ಕಾಣಿಸುವ ಲಕ್ಷಣಗಳಿವೆ. ಉತ್ತರದಿಂದ ದಕ್ಷಿಣದ ಕರ್ನಾಟಕಕ್ಕೆ ಎಲ್ಲಮ್ಮ ಬಂದ ಬಗ್ಗೆ ಇರುವ ಮಾಹಿತಿಯನ್ನಾಧರಿಸಿ ನೋಡಿದರೆ, ಪ್ರಸ್ತುತ ಮಹಾರಾಷ್ಟ್ರ ರಾಜ್ಯದ ಕರಾಡ ಸಮೀಪವಿರುವ 'ಔಂದ್' ಪ್ರದೇಶದಲ್ಲಿ, ಎಲ್ಲಮ್ಮನ ಕುರುಹುಗಳು ಇನ್ನಷ್ಟು ಸಂಶೋಧನೆಗೆ ಇಂಬನ್ನು ಕೊಡಬಲ್ಲವು.

ಕೊನೆಯದಾಗಿ ಇಂದಿನ ಸೂಕ್ಷ್ಮ, ಭಾವನಾತ್ಮಕ ಪರಿಸ್ಥಿತಿಯಲ್ಲಿ ಎಲ್ಲಮ್ಮನ ಕುರಿತಾದ ವಿಷಯಗಳು ಸುಲಭವಾಗಿ ಬಗೆಹರಿಯುವಂತಹುವಲ್ಲ. ಧಾರ್ಮಿಕ ವಿಚಾರಗಳು ಒಮ್ಮೊಮ್ಮೆ ಆತಂಕದ ಪರಿಸ್ಥಿತಿಯನ್ನು ತರಬಲ್ಲವು. ಇಂತಹ ಕಾರಣಕ್ಕಾಗಿ ಸತ್ಯ ಮರೆಯಲ್ಲಿ ಉಳಿಯುವ ಸಂಭವವೇ ಜಾಸ್ತಿ. ಅದಕ್ಕಾಗಿ ಈಗಿರುವ ಸ್ಥಿತಿಯಲ್ಲಿಯೇ ಎಲ್ಲಮ್ಮನನ್ನು ಆಕೆಯ ಘನತೆಗೆ ಒಪ್ಪುವ ವಿವರಗಳ ಜೊತೆ ಹೊಂದಿಕೊಂಡು ಬಾಳುವುದೇ ಸರಿಯೆನಿಸುತ್ತದೆ.

**ಆಕರ ಗ್ರಂಥಗಳು**


1. ಡಾ. ದೇವೆಂದ್ರಕುಮಾರ ಹಕಾರಿ – ಎಲ್ಲಮ್ಮನನ್ನು ಕುರಿತ ಪೌರಾಣಿಕ ಸಂಗತಿಗಳು: ಒಂದು ವಿವೇಚನೆ: ಜಾನಪದ ಸಾಹಿತ್ಯ ದರ್ಶನ–11–ಪ್ರ. ಪು.44 ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಚಂದ್ರಗೌಡ ಕುಲಕರ್ಣಿ– ಎಲ್ಲಮ್ಮನ ಆಟ. ಪ್ರ: ಸಂಗಾತಿ ಪ್ರಕಾಶನ ಕಡದಳ್ಳಿ, ಪುಟ 15
3. ಅ.ಸುಂದರ: ಸವದತ್ತಿ ಎಲ್ಲಮ್ಮ: ಚರಿತ್ರೆ ಮತ್ತು ಸ್ಥಳ ವಿವರ– ಜಾನಪದ ಸಾಹಿತ್ಯ ದರ್ಶನ–11: ಪು.16 ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಡಾ.ಎಂ.ಎಂ.ಕಲಬುರ್ಗಿ–ಮಾರ್ಗ ಸಂಪುಟ–3. ಪುಟ450, ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
5. ಡಾ.ಕಮಲಾ ಹೆಮ್ಮಿಗೆ – ಸವದತ್ತಿ ಎಲ್ಲಮ್ಮ: ಒಂದು ಸಾಂಸ್ಕೃತಿಕ ಅಧ್ಯಯನ (ಸಂಶೋಧನ ಪ್ರಬಂಧ)